Reg No. B G 155

14-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಳ್ಳಾರ ಚಿನದ ಗಣಿ ಆರಂಭಿಸಲು ಒತ್ತಾಯ

5 ವರ್ಷಗಳಿಂದ ಪ್ರಜ್ಞೆ ಇಲ್ಲ

ಮಾಡ್ರಿಡ್—5 ವರ್ಷಗಳಿಂದ ಜ್ಞಾನ ಶೂನ್ಯನಾಗಿ ಆಸ್ಪತ್ರೆಯಲ್ಲಿರುವ ಪ್ರಸಿದ್ಧ ಫುಟ್‌ಬಾಲ್ ಆಟಗಾರ ಅಲಿನಾರ್ ಮಿಗುಲ್ಲರ ಪತ್ನಿ, ಆತನು ಬದುಕುತ್ತಾನೆಂಬ ಪೂರ್ಣ ನಂಬಿಕೆ ಇಟ್ಟುಕೊಂಡು ಎ ಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಾಳೆ. ಡಾಕ್ಟರರು ಏನೂ ಹೇಳಲಾರದವರಾಗಿದ್ದಾರೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕಿನ್ಹಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಲೀಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಡಾಮಂಜಪುರಂ. ಮೈಸೂರು 4.

ಕನ್ನಡ ಬಗ್ಗೆ ಅಲಕ್ಷ್ಯ

ಬೆಂಗಳೂರು— ಸೋಲಾಪುರದ ಕನ್ನಡ ಏಕೀಕರಣ ಸಮಿತಿಯು ಪ್ರಧಾನಿ ಮತ್ತಿತರರಲ್ಲಿ ಅರ್ಪಿಸಿದ ಮನವಿಯಲ್ಲಿ, ಮಹಾರಾಷ್ಟ್ರದಲ್ಲಿ ಕನ್ನಡವನ್ನು ಅಲಕ್ಷ್ಯಿಯಿಂದ ಕಾಣಲಾಗುತ್ತಿದೆಯೆಂದು ತಿಳಿಸಲಾಯಿತು. – ಮಹಾರಾಷ್ಟ್ರ ಮುಖ್ಯಮಂತ್ರಿಯವರಿಗೆ ಬರೆಯುವದಾಗಿ ಪ್ರಧಾನಿಯವರು ತಿಳಿಸಿದರು.

ಏ ಐ ಸಿ ಸಿ ಯಲ್ಲಿ

ಯಂಗ್ ಟರ್ಕ್ ಹೆಸರನ್ನು ಯಂಗ್ ಇಂಡಿಯಾ ಎಂದು ಬದಲಾಯಿಸಿಕೊಳ್ಳಬೇಕೆಂದೂ, ಯಾಕೆ ವಿದೇಶೀ ಹೆಸರನ್ನು ಹೊಂದಿರಬೇಕೆಂದೂ ಡಾ ॥ ಸುಶೀಲ ನಾಯರ್ ಹೇಳಿದರು

ಶ್ರೀ ವಿಭೂತಿ ಮಿಶ್ರರು, ಮಂತ್ರಿಗಳ ದುಂದು ಮತ್ತು ಸುಖಭೋಗ ಬಗ್ಗೆ ಕಟುವಾಗಿ ಟೀಕಿಸಿ, ಬ್ರಿಟಿಷರಲ್ಲಿ ಸಹಿತ ಈ ಆಡಂಬರ ಪ್ರದರ್ಶನವಿಲ್ಲವೆಂದರು.

ಬ್ಯಾಂಕು ರಾಷ್ಟ್ರೀಕರಣವನ್ನು ವಿರೋಧಿಸಿದ ಶ್ರೀ ಶಾರದಾ ಮುಖರ್ಜಿಯವರು, ರೂ. 500 ಕೋಟಿ ಬಂಡವಾಳ ಹೆವಿ ಎಂಜಿನೀರಿಂಗ್ ಕಾರ್ಪೊರೇಷನ್ ರೂ. 5 ಕೋಟಿ ಉತ್ಪತ್ತಿ ಮಾಡುತ್ತಿದೆಯೆಂದೂ ಸರಕಾರಿ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದೂ ಟೀಕಿಸಿದರು.

ಡಾ ॥ ಕಾಸ್ಲಿವಾಲರು, ಸಮಾಜವಾದ ಮಾಡುತ್ತಿರುವ ಪಾರ್ಲಿಮೆಂಟು ಸದಸ್ಯರು ತನ್ನ ದಿನಭತ್ಯವನ್ನು ರೂ 31 51 ಕ್ಕೆ ಹೆಚ್ಚಿಸಿಕೊಳ್ಳುತ್ತಿರುವದು ಎಂಥಾ ಸಮಾಜವಾದವೆಂದು ಹೇಳಿದರು

ಕೇರಳದ ಕಾಂಗ್ರೆಸ್ ಸದಸ್ಯೆ ಶ್ರೀಮತಿ ನಫೀಸಾಥ್ ಬೀಬಿಯವರು, ಕೇರಳ ಜನತೆ ನಮ್ಮ ಮುಖ್ಯ ಮಂತ್ರಿ ಶ್ರೀ ನಂಬೂದರಿ ಪಾದದಿಂದ ಏನು ನ್ಯಾಯವನ್ನೂ ಪಡೆಯಲಾರರೆಂದೂ, ಅವರು ಜನತೆ ಕಲ್ಯಾಣ ನೋಡಿಕೆಕೊಳ್ಳುವುದಿಲ್ಲವೆಂದೂ, ಕೇರಳವನ್ನು ಹಿಂದುಳಿದ ಭಾಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದೂ ಹೇಳಿದರು.

ಸತ್ಕಾರ

ಬೆಂಗಳೂರು— ಮೈಸೂರು ಹರಿಜನ ಸೇವಕ ಸಂಘವು ಪ್ರಧಾನಿಯವರ ಗೌರವಾರ್ಥ ಸತ್ಕಾರಕೂಟ ಏರ್ಪಡಿಸಿತ್ತು – ಪ್ರಧಾನಿ ಇಂದಿರಾರವರ ಜೊತೆ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರೂ ಇದ್ದರು.

ರಷ್ಯಾ ಒಂದು ಹೆಜ್ಜೆ ಮುಂದೆ

ಮಾಸ್ಕೊ— ಚಂದ್ರನಲ್ಲಿ ಇಳಿದು, ಅಲ್ಲಿಂದ ವಾಪಸ್ಸು ಬರಬಲ್ಲಂಥಾ ಲೂನಾ 15 ಅನ್ನು ರಷ್ಯಾ ನಿನ್ನೆ ಹೊರಡಿಸಿತು – ಅಮೇರಿಕವು ಅಪೊಲೊ 11 ಅನ್ನು ಕಳಿಸುವ ಮುನ್ನ ಈ ಸಾಹಸ ನಡೆಯಿತು.

ಯಾವುದು ಹೆಚ್ಚು

ಬೆಂಗಳೂರು— ದೇಶ ಮತ್ತು ಜನತೆಯು ಕಾಂಗ್ರೆಸ್‌ಗಿಂತ ಪ್ರಾಮುಖ್ಯವೆಂದು ಪ್ರಧಾನಿ ಇಂದಿರಾರವರು ಹೇಳಿದರು.

ಬೆಳ್ಳಾರ ಚಿನ್ನದ ಗಣಿ

ಬೆಂಗಳೂರು—ತುಮಕೂರು ಜಿಲ್ಲೆಯ 6 ಮಂದಿ ಶಾಸಕರು ಪ್ರಧಾನಿಯವರಿಗೆ ಮನವಿಪತ್ರ ಅರ್ಪಿಸಿ, 10 ವರ್ಷಗಳ ಕಾಲ ಕೆಲಸ ನಡೆಸಿದ ನಂತರ 1954 ರಲ್ಲಿ ಮುಚ್ಚಲ್ಪಟ್ಟಿರುವ ಬೆಳ್ಳಾರ ಚಿನ್ನದ ಗಣಿಯನ್ನು ಮತ್ತೆ ತೆರೆಯಲು ತಿಳಿಸಿದರು.

ಎರಡನೇ ಮದುಯಾದ್ದಕ್ಕೆ

ಹುಬ್ಬಳ್ಳಿ— ತನ್ನ ಮೊದಲನೆ ಹೆಂಡತಿ ಬದುಕಿರುವಾಗ ಎರಡನೇ ಮದುವೆ ಮಾಡಿಕೊಂಡ ಹನುಮಂತಪ್ಪನಿಗೆ ನ್ನು ವನಿಗೂ, ಪುರೋಹಿತ ಮತ್ತಿತರಿಬ್ಬರಿಗೂ ತಲಾ 6 ತಿಂಗಳು-ಸಜಾ ಮತ್ತು ರೂ 500 ಜುಲ್ಮಾನೆ ವಿಧಿಸಲಾಯಿತು.

ಎಲ್ ಐ ಸಿ ನೆರವು

ನವದೆಹಲಿ ರಾಜ್ಯ ಸರಕಾರಗಳು ತಮ್ಮ ವಸತಿ ನಿರ್ಮಾಣ ಕಾರ್ಯಕ್ರಮವನ್ನು ಬೇಗಬೇಗನೆ ನಡೆಸಲು ಅನುಕೂಲವಾಗುವಂತೆ ಕೇಂದ್ರ ಕಾಮಗಾರಿ ಮತ್ತು ವಸತಿ ಸಚಿವಾಲಯವು ಜೀವ ವಿಮಾ ಸಂಸ್ಥೆಯನ್ನು ಹಣ ಬಿಡುಗಡೆ ಮಾಡಲು ಕೇಳಲಿದೆ.

ರಾಜಧಾನಿ ಬದಲಾವಣೆಗೆ

ಹೈದರಾಬಾದು— ರಾಜಧಾನಿಯನ್ನು ಹೈದರಾಬಾದಿನಿಂದ ಆಂಧ್ರ ಭಾಗಕ್ಕೆ ವರ್ಗಾಯಿಸಬೇಕೆಂದು ಆಂಧ್ರ ಮತ್ತು ವೆಂಕಟೇಶ್ವರ ವಿಶ್ವವಿದ್ಯಾನಿಲಯಗಳ ಜಂಟಿ ಕಾರ್ಯಾಚರಣ ಸಮಿತಿ ಕೇಳಿಕೆ ಹಾಕಿದೆ : ಸರ್ಕಾರಿ ಕಚೇರಿ ಮತ್ತು ಹೈಕೋರ್ಟನ್ನೂ ವರ್ಗಾಯಿಸಬೇಕೆಂದೂ ಕೇಳಿದೆ – ಅನಂತಪುರದ ವಕೀಲ ಸಂಘವೂ ಈ ರೀತಿ ಕೇಳಿಕೊಂಡಿದೆ.

ಅಲ್ಲಿ ಕುಟುಂಬ ಯೋಜನೆ ಇಲ್ಲ

ಹಿಮಾಲಯದ ಗಿಲ್ಜಿಟ್‌ನಲ್ಲಿ ವಧುವರರ ತಂದೆತಾಯಿಗಳೇ ವಿವಾಹ ನಿಶ್ಚಯಿಸುವರು – ಅಲ್ಲಿ ಕುಟುಂಬ ಯೋಜನೆಯ ವಿಷಯವೇ ಇಲ್ಲ – ತಮಗೆ ಸಾಧ್ಯವಾದ ಪುತ್ರ ಮಕ್ಕಳನ್ನು ಉತ್ಪಾದಿಸಬಹುದು.

ಒಪ್ಪಿದರು !

ಬಡತನವು ದೇಶದಿಂದ ಹೊರದೂಡಲ್ಪಡಬೇಕೆಂಬುದನ್ನೂ ಎಲ್ಲರಿಗೂ ಉದ್ಯೋಗ ದೊರೆಯಬೇಕೆಂಬುದನ್ನೂ ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಒಪ್ಪಿದರು.

ಎಂದು ನಿರ್ಧಾರ !

ಬೆಂಗಳೂರು— ಮಹಾಜನ ಕಮಿಷನ್ ವರದಿ ಬಗ್ಗೆ ತೀರ್ಮಾನಕ್ಕೆ ಕೇಂದ್ರ ಸರಕಾರಕ್ಕೆ ಎಷ್ಟು ಕಾಲ ಹಿಡಿಯುವುದೋ ಗೊತ್ತಿಲ್ಲವೆಂದು ಪ್ರಧಾನಿಯರು ಹೇಳಿದರು.

ಅಧ್ಯಕ್ಷರ ಚುನಾವಣೆ

ನವದೆಹಲಿ— ರಾಷ್ಟ್ರಾಧ್ಯಕ್ಷರ ಚುನಾವಣೆಯ ವೋಟಿಂಗು ಆಗಸ್ಟು 16 ರಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ನಡೆಯುವುದು.

ಅಧ್ಯಕ್ಷತೆ ಉಮೇದುವಾರರು

ನವದೆಹಲಿ— ರಾಷ್ಟ್ರಾಧ್ಯಕ್ಷತೆಗೆ ಸ್ಪರ್ಧಿಕರು ಶ್ರೀ ಸಂಜೀವರೆಡ್ಡಿಯವರು ಕಾಂಗ್ರೆಸ್ ಪಾರ್ಟಿ ಉಮೇದುವಾರರೆಂದು ಪ್ರಕಟಿಸಲಾಯಿತು - ಕೂಡಲೇ ಹಂಗಾಮಿ ಅಧ್ಯಕ್ಷ ಶ್ರೀ ಗಿರಿಯವರು ತಾವು ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸುವುದಾಗಿ ಪ್ರಕಟಿಸಿರುವರು.

ಕಾಂಗ್ರೆಸ್ ಭವನವು ಸಂಪತ್ತಿನ ಅಸಭ್ಯತೆ ಪ್ರದರ್ಶಿಸುತ್ತಿದೆ

ಕಲ್ಕತ್ತಾದ ಕಾಂಗ್ರೆಸ್ ಭವನವು ಸಂಪತ್ತಿನ ಅಸಭ್ಯತೆಯನ್ನು ಪ್ರದರ್ಶಿಸುತ್ತಿದೆ, ಎಂದು ಏ ಐ ಸಿ ಸಿ ಸದಸ್ಯ ಶ್ರೀ ನಾರಾಯಣ ಚೌಧುರಿ ಮತ್ತು ಪ್ರದೇಶ ಕಾಂಗ್ರೆಸ್ಸು ಸಮಿತಿಯ ಮೂವರು ಸದಸ್ಯರೂ ಸೇರಿ ಎಂಟು ಮಂದಿಯ ತಂಡವು ಭೇಟಿ ನೀಡಿದ ತನಿಖಾ ಸಮಿತಿ ಅಧ್ಯಕ್ಷ ಡಾ॥ ಮೇಲ್ಕೋಟೆಯವರಿಗೆ ಕೊಡಲಾದ ವಿನ್ನವತ್ತಳೆಯಲ್ಲಿ "ಊರೆ ಆಡಂಬರದ ಕಟ್ಟಡ, ಸಿಯೋಲೈಟುಗಳು, ಏರ್‌ಕಂಡಿಷನಗಳು, ರಿಫ್ರಿಜೇಟರುಗಳು, ಗಾಜಿನ ಹಲಗೆಗಳನ್ನು ಹಾಕಿರುವ ಟೇಬಲುಗಳು, ಕ್ರೋಮಿಯಂ ಗಿಲೀಡಿನ ಡನ್‌ಲಾಪ್ ಪಿಲ್ಲೋ ಕುರ್ಚಿಗಳು, ಬಿಳೀಬಣ್ಣದ ಟೆಲಿಫೋನುಗಳೂ ಇದ್ದು, ನಮ್ಮೀಶದ ಮಮತೆಯನುಭವಿಸಿದ ಮತ್ತು ಸರಿಯಾಗಿ ಅನ್ನಬಟ್ಟೆಯಿಲ್ಲದ ಅತಿ ಬಡವರ ಉದ್ಧಾರಕ್ಕಾಗಿ ನಿಂತಿರುವುದಾಗಿ ಪ್ರತಿಜ್ಞೆ ಹೊಂದಿರುವ ಪಶ್ಚಿಮ ಬಂಗಾಳಾ ಕಾಂಗ್ರೆಸ್ ಕೇಂದ್ರವಾಗಿರಲಾರದು" ಎಂದು ತಿಳಿಸಿರುವರು.

ಪಶ್ಚಿಮ ಬಂಗಾಳಾ ಕಾಂಗ್ರೆಸ್ ನಾಯಕರು ಕೆಲವರ ಜೀವಿತ ಮಾರ್ಗ ಮತ್ತು ಆಡಂಬರ ನಡವಳಿಕೆಯು, ನಮ್ಮ ದೇಶದ ಬಡಜನರನ್ನು ಮತ್ತು ಹಿಂದಟ್ಟುವಂತಿದೆ ಎಂದೂ ಹೇಳಿರುವರು. ಕಮಿಟಿಗಳನ್ನು ತುಂಬಿರುವ ಎಷ್ಟು ಕಾಂಗ್ರೆಸಿಗರು, ಪರ್ಮಿಟ್ ಪಡೆದವರೂ, ಲೈಸೆನ್ಸು ಪಡೆದವರೂ, ವಾಣಿಜ್ಯೋದ್ಯಮಿಗಳೂ ಆಗಿರುವೆದನ್ನು ತಿಳಿಯುವುದು ಸ್ವಾರಸ್ಯ ವಿಷಯವೆಂದೂ ತಿಳಿಸಿರುತ್ತಾರೆ.

† ಇಂತಹವರಿಗೆ ಬಡಬಗ್ಗರ ಬಗ್ಗೆ ಏನು ಲಕ್ಷ್ಯವಿರುತ್ತದೆ! [ಟ್ರೂತ್]

ಗಾಂಧೀಜೀ ಅಮೃತವಾಣಿ

ದೇವರು ದೊಡ್ಡವನು, ದಯಾಮಯನು : ಅವನು ತನ್ನನ್ನು ಸೇವಿಸುವವರನ್ನು ತಾಳ್ಮೆಗೆಡುವಷ್ಟು ಪರೀಕ್ಷಿಸುವುದಿಲ್ಲ.



Protect the Cow

ಗೋರಕ್ಷಣೆಗೆ ಬೆಂಬಲ ಕೊಡಿ

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್

ಆನೋಘ 2 ನೇ ವಾರ

ಉತ್ತರ ಭಾರತವಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಅಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯನೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿರಿ

ಅ ನೋ ಖಿ ರಾ ತ್

ಸಂಗೀತ — ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್ ಮುಖ್ರಿ ಮುಂತಾದವರು

[ದಿನ 3 ಪ್ರದರ್ಶನಗಳು]

ಅಪೆರಾ — 11-7-69 ರಿಂದ

ಅನೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi. Sri Opera Talkies. Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality—Printing—Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4